ತನು ಮನವನ್ನು ಹಸಿರಿಗೆ ಮುಡುಪಾಗಿಟ್ಟಿದ್ದ ತುಳಸಜ್ಜಿ ಉಸಿರು ನಿಂತಿದೆ. ಆದರೆ ಅವರು ನೆಟ್ಟ ಲಕ್ಷಾಂತರ ಮರಗಳು ಉಸಿರಾಗಿವೆ.

# ಹಸಿರೆಲೆಯಲಿ ಆಡಗಿದ ತುಳಸಿ

■ ಅಕ್ಷತಾ ಕೃಷ್ಣಮೂರ್ತಿ

ಕ್ಯಾರಿಕೇಚರ್: ನಂಜುಂಡಸ್ವಾಮಿ




ಹಾಲಕ್ಕಿ ಜನಾಂಗ ಉತ್ತರ ಕನ್ನಡ ಜಿಲ್ಲೆಗೆ ನೀಡಿದ ಕೊಡುಗೆ ಅಪಾರ. ತನ್ನ ಶ್ರೀಮಂತ ಸಂಸ್ಕೃತಿಯಿಂದ ಎಲ್ಲರಿಗೆ ಎದ್ದು ಕಾಣುವ ಮಹಾ ವೃಕ್ಷದಂತೆ ಹಚ್ಚ ಹಸಿರಾಗಿ ಕಂಗೊಳಿಸುವ ಹಾಲಕ್ಕಿ ಸಂಸ್ಕೃತಿಯಲ್ಲಿ ಕಲೆಯಿದೆ, ಹಾಡು ಹಸೆಯಿದೆ. ಪ್ರಕೃತಿಯಿದೆ. ಜಾನಪದ ಸಂಪತ್ತಿದೆ. ಸರ್ವ ರೋಗಗಳನ್ನು ಗುಣಪಡಿಸಬಲ್ಲ ವನಸ್ಪತಿ ಔಷಧಿಗಳ ಸಂಗ್ರಹವಿದೆ, ಹೊಸ ಹೊಸ ಕನ್ನಡ ಪದಗಳ ಸಿರಿಯೂ ಇದೆ.

ಹಾಲಕ್ಕಿ ಜನಾಂಗದಲ್ಲಿ ಹುಟ್ಟಿದವರು ತುಳಸಿ ಗೋವಿಂದ ಗೌಡ. ಬಿರುದು ಸನ್ಮಾನಗಳನ್ನು ಪಡೆಯಲು ಅಕ್ಷರದ ಹಂಗಿಲ್ಲ; ಸರಳ ಜೀವನದ ಜೊತೆ ನಿಸ್ವಾರ್ಥ ಕಾಯಕವಿದ್ದರೆ ಸಾಕು ಎಂಬುದಕ್ಕೆ ಸಾಕ್ಷಿಯಾಗಿದ್ದವರು ತುಳಸಿ.

ಅಂಕೋಲಾ– ಯಲ್ಲಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಗಸೂರಿನ ಸಮೀಪವಿರುವ ಹೊನ್ನಳ್ಳಿ ಊರಿನಲ್ಲಿ ತುಳಸಿ ಅವರ ಮನೆ. ಹೆದ್ದಾರಿಯಿಂದ ಮೂರ್ನಾಲ್ಕು ನಿಮಿಷ ಕಾಲ್ನಡಿಗೆ ಹಾದಿ ಸವೆಸಿದರಾಯಿತು. ಅವರ ಮನೆ ಸಿಗುತ್ತದೆ. ಮನೆಯ ಪಡಸಾಲೆಯ ಚಿಟ್ಟೆ ಬಂದವರಿಗೆಲ್ಲ ಕುಳಿತುಕೊಳ್ಳುವ ಕುರ್ಚಿಯಾಗಿಯೂ ಬಹಳಷ್ಟು ಸಲ ಕೆಲಸ ನಿರ್ವಹಿಸಿದೆ. ಅವರ ಮೊಮ್ಮಗ ಶೇಖರ, 'ತುಳಸಿ ನಿವಾಸ' ಎಂದು ಒಳಗೋಡೆಯ ಮೇಲೆ ಬರೆಸಿದ್ದಾನೆ. 'ಅಜ್ಜಿಯ ಮನೆಗೆ ಅಜ್ಜಿಯ ಹೆಸರೇ ಇರಲಿ' ಎಂಬುದು ಅವನ ಆಸೆ. ಅದನ್ನು ಮನೆಗೆ ಹೋದವರ ಬಳಿ ಹೇಳುತ್ತಾನೆ. ಶೇಖರ ಅಜ್ಜಿಯ ಪ್ರೀತಿಯ ಮೊಮ್ಮಗ. ಅಜ್ಜಿಯ ಬೆನ್ನ ಹಿಂದೆಯೇ ಇದ್ದವ. ಪಡಸಾಲೆಗೆ ತಾಗಿರುವ ಗೋಡೆಗೆ ಇದ್ದ ಶೋಕೇಸಿನಲ್ಲಿ ತುಳಸಿ ಅವರಿಗೆ ಲಭಿಸಿದ ನೂರಾರು ಸನ್ಮಾನಗಳ, ಪ್ರಶಸ್ತಿಗಳ ಫಲಕಗಳು ಸಾಲುಗಟ್ಟಿ ನಿಂತಿವೆ. ಅವುಗಳನ್ನು ಜತನದಿಂದ ಇಟ್ಟು, ಅಜ್ಜಿಯ ಜೊತೆಯಲ್ಲಿ ಸಸಿಗಳ ಕತೆ ಕೇಳುತ್ತಾ ಇದ್ದ ಇನ್ನೊಂದು ಜೀವ ಸೊಸೆ ಎಂಕಮ್ಮ.

ತುಂಬು ಕುಟುಂಬದ ನಡುವೆ ಇದ್ದ ತುಳಸಿ, ಸದಾ ಯೋಚಿಸುತ್ತಿದ್ದುದು ಮರಗಳ ಕುರಿತು. ಮನೆಯ ತೆಣೆ ಮೇಲೆ ಕುಳಿತು ಬಂದವರನ್ನು ಪ್ರೀತಿಯಿಂದ ಮಾತಾಡಿಸುತ್ತಿದ್ದ ಅವರದ್ದು ಆಕರ್ಷಕ ವ್ಯಕ್ತಿತ್ವ. ತುಳಸಿ ನಕ್ಕರೆ ಅವರ ಕಣ್ಣಲ್ಲಷ್ಟೇ ಹೊಳಪು ಕಾಣಿಸುತ್ತಿರಲಿಲ್ಲ; ಅವರ ಇಡೀ ಶರೀರ ನಕ್ಕಂತೆ ಅಕ್ಕರೆ ಸೂಸುತ್ತಿತ್ತು. ಮುಂದಿನ ನಾಲ್ಕು ಉದುರಿದ ಹಲ್ಲುಗಳ ಬಾಯಲ್ಲಿ ನಗೆ ತುಂಬಿಕೊಂಡರೆ ಸುತ್ತ ಹೂ ಅರಳಿದಷ್ಟೇ ಸಂಭ್ರಮ ಕಾಣುತ್ತಿತ್ತು. ಒಂದು ಹೂ ಹೊತ್ತ ಮರವನ್ನು ನೋಡಿದಾಗ ಸಿಗುವ ಸಂತಸ ತುಳಸಿ ಅವರನ್ನು ನೋಡಿದಾಗ ಪ್ರತಿಯೊಬ್ಬರಿಗೂ ಸಿಗುತ್ತಿತ್ತು.

ತುಳಸಿ ಗೌಡ ಅವರ ತಂದೆ ಹೆಸರು ನಾರಾಯಣ ಗೌಡ, ತಾಯಿ ಹೆಸರು ನೀಲಿ. ನಾರಾಯಣ ಗೌಡರಿಗೆ ಇಬ್ಬರು ಹೆಣ್ಣು ಮಕ್ಕಳು. ಮೊದಲನೆಯವಳು ತುಳಸಿ, ಎರಡನೆಯವಳು ದೇವಿ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು, ಕಷ್ಟದಲ್ಲೇ ಬೆಳೆದ ತುಳಸಿ, ತಾಯಿ ನೀಲಿಯೊಂದಿಗೆ ಕೆಲಸ ಮಾಡಲು ಶುರು ಮಾಡಿದರು. ತಾಯಿಗೆ ನೆರವಾದರು. ತಮ್ಮ ಮನೆತನ ಹಾಗೂ ಊರಿನ ಬಗ್ಗೆ ಹೇಳಬೇಕಾದರೆ ತುಳಸಿ ಅವರು ಗದ್ದೆಗಳ